ಮಾಡಲು ಆಗುತ್ತಿರಲಿಲ್ಲ. ಆಗ ಮಾತ್ರ ಅರಮನೆಯಲ್ಲಿ ರಾಜಕುಮಾರನನ್ನು ಅದರ ತಾಯ ಬಳಿ ಬಿಟ್ಟು ಹೋಗಬೇಕಾಗುತ್ತಿತ್ತು. ಆ ವೇಳೆಯಲ್ಲಿ ಜಾನಕಿ ಏನೇನು ತಿನ್ನಿಸಿಬಿಡುವಳೊ ಎನ್ನುವ ಭಯ ಕಾಡುವುದು. ಜಾನಕಿ ಹಾಗೆಯೇ ಮಾಡುತ್ತಿದ್ದದ್ದೂ ಉಂಟು. ಮನೆಯಲ್ಲಿ ಏನು ಉಳಿದಿರಲಿ, ಕೈಗೆ ಸಿಗಲಿ, ಅದನ್ನು ಉಣಿಸಿಬಿಡುತ್ತಿದ್ದಳು. ವನಜ ತಾನು ಕೆಲಸ ಮಾಡಿ ಬರುತ್ತಿದ್ದ ಮನೆಗಳಲ್ಲಿ ಚೂರುಪಾರು ಕರಿದ ತಿಂಡಿ, ಹಿಟ್ಟು, ಕಾಯಿಪಲ್ಲೆ ತಂಗಳು ಏನಾದರೂ ತಂದರೆ ಎಲ್ಲವನ್ನೂ ಬೀಗ ಹಾಕಿಯೇ ಜಾಯಿಕಾಯಿ ಮರದ ಪೆಟ್ಟಿಗೆಯೊಂದರಲ್ಲಿ ಜಾನಕಿ ಕಾಣದಂತೆ ಮುಚ್ಚಿಡಬೇಕಾಗುತ್ತಿತ್ತು. ಒಂದಿಷ್ಟು ಮರೆತರೆ ಜಾನಕಿ ದರೋಡೆ ಮಾಡಿ ಮಗನಿಗೆ ತಿನ್ನಿಸಿಬಿಡುತ್ತಿದ್ದಳು. ಅದಿಲ್ಲದಿದ್ದರೆ ಹೇಗೊ ತಾನೇ ಶೇಖರಿಸಿಕೊಳ್ಳುತ್ತಿದ್ದ ಪುಡಿಗಾಸಿನ ಗಂಟಿನಿಂದ ಐಯಂಗಾರ್ ಬೇಕರಿಗೆ ಹೋಗಿ ಬನ್ನನ್ನೋ, ಬ್ರೆಡ್ಡನ್ನೊ ತಂದು ಮಗುವಿನ ಹೊಟ್ಟೆಗೆ ಗಿಡಿಯುತ್ತಿದ್ದಳು.

******

'ಯಾಕೆ ಜಾನೂ, ಮಗೂನಳಸ್ಬಿಟ್ಯೋ ಇಲ್ವೊ?...' ಖಾರವಾಗಿ ಮಗು ಚೀರಾಡುತ್ತಿದ್ದಾಗಲೇ ವನಜ ಹಿಂದಿರುಗಿ ಬಂದಿದ್ದಳು. 'ಖಾರದ ಹಪ್ಪಳ ತನ್ನಿಸ್ಬಿಟ್ಯಾ?...' ಎನ್ನುತ್ತಾ ಮಗುವನ್ನು ಸೆಳೆದುಕೊಂಡಳು. ದೊಡ್ಡಮ್ಮನ ಸೊಂಟಕ್ಕೆ ಪ್ರೊಮೋಶನ್ ದೊರೆತೊಡನೆ ಆ ಕೂಸಿನ ಅಳು ಎಲ್ಲಿ ಹಾರಿಹೋಯಿತೊ.

'ಬೇಡ ಪುಟ್ಟಣ್ಣಾ... ನನ್ನಪ್ಪಾ... ನಿನ್ನಪ್ಪಾ!... ನಿನ್ನಮ್ಮ ಅಳಸ್ಬಿಟ್ಲೇನೇ?...' ಎನ್ನುಷ್ಟರಲ್ಲಿ ಜಾನಕಿ ಗಟ್ಟಿಯಾಗಿ ನಗುತ್ತಾ ಮತ್ತೆ ಬಿಸಿಲ ಬೆಳದಿಂಗಳಲ್ಲಿ ವಿಹರಿಸಲು ಹೊರಟಳು.

'ಏ ಜಾನ್ಕೀ... ಒಳಗ್ಬಾ... ಬಿಸಿಲಿಗೆ ತಲೆ ಕಾಸಿಕೊಳ್ತೀಯಾ ಯಾಕೆ?...' ಮಗುವನ್ನೂ ಎತ್ತಿಕೊಂಡು ಜಾನಕಿಯ ಹಿಂದೆ ಹೋದಳು. ಜಾನಕಿ ಅಕ್ಕನ ಮಾತನ್ನು ಗಮನಿಸದೆಯೇ ಮಗುವನ್ನೇ ನೋಡುತ್ತಾ.

'ಮಗು ಅಳು ನಿಲ್ಲಿಸ್ಬಿಡ್ತಾ?... ಪಾಪ...' ಮತ್ತೆ ಏನೊ ಗಾನ ಗುಂಯ್‌ಗುಡುತ್ತಾ ಅಂಗಳದ ಕಡೆಗೆ ನಡೆದಳು.

'ಸಾಕಪ್ಪಾ!... ಸಾಕು... ಇವಳ ಬಳಿ ಈ ಮಗೂನ ಬಿಟ್ಟು ನಾನು ಹೋಗ್ತೀನಿ... ತನ್ನ ಮೈಮೇಲೇ ತನಗೆ ಜ್ಞಾನವಿಲ್ಲ... ಮಗೂನ ಯಾವ್ದಿನ ಏನು ಮಾಡಿಬಿಡ್ತಾಳೊ!... ಯಾಕಳ್ತಿತ್ತೋ ಏನೊ. ಖಾರದ ಹಪ್ಪಳ ಕೊಟ್ಟಿದ್ದಾಳೆ ಸಮಾಧಾನ ಮಾಡಕ್ಕೆ...' ಮಗು ತನ್ನನ್ನೇ ತಾಯಿಗಿಂತ ಹೆಚ್ಚಾಗಿ ಅವಲಂಬಿಸಿದೆ ಎಂದು ಒಂದು ರೀತಿ ಅಭಿಮಾನವೇ ಬೆಳೆದಿತ್ತು ವನಜಳಿಗೆ. ಜಾನಕಿ ಮಗು ಅತ್ತಾಗ ತಿನ್ನಿಸುವುದೊಂದನ್ನು ಬಲ್ಲಳೇ ಹೊರತು ತನ್ನ ಕರುಳ ಕುಡಿಯನ್ನು ತಾನು ಬೆಳಸಿಕೊಂಡು ಪೋಷಿಸಿಕೊಳ್ಳಬೇಕೆಂಬ ಆಸಕ್ತಿಯನ್ನೇ ಅವಳ ಮಿದುಳು ಕಳೆದುಕೊಂಡಿತ್ತು.

ವನಜ ತಂಗಿಯನ್ನು ಬಲವಂತವಾಗಿ ಒಳಗೆ ಕರೆದುಕೊಂಡು ಮುಂಬಾಗಿಲಿನ ಅಗುಳಿ ಹಾಕಿ ಮಗುವನ್ನು ಮುದ್ದಿಸಿ ತಟ್ಟುತ್ತಾ ಜೋಗುಳ ಹಾಡಿದಳು.

ಅವಳನ್ನೇ ನೋಡುತ್ತಾ ಜಾನಕಿ ಭ್ರಮಿಷ್ಠಳಾಗಿ ಗೋಡೆಗೊರಗಿ ಕುಳಿತುಬಿಟ್ಟಿದ್ದಳು.

'ಒಂದು ಚೂರು ಒಬ್ಬಟ್ಟಿದೆ. ತಕ್ಕೊಳ್ತಿಯೇನೆ?...' ಎಂದಳು ವನಜ. ಸೆರಗಲ್ಲಿ ಯಾರದೊ ಮನೆಯ ಒಬ್ಬಟ್ಟು ಅಡಗಿಸಿ ತಂದದ್ದನ್ನು ಅರೆನಿದ್ದೆಯಲ್ಲಿ ಇಳಿಯುತ್ತಿದ್ದ ಮಗುವಿಗೆ ಕಾಣದಂತೆ ಬಿಚ್ಚಿದಳು.

'ಅಯ್ಯೋ ರಾಮಾ...' ಎಂದು ಜಾನಕಿ ನಕ್ಕಳೇ ವಿನಾ ಬೇಕು, ಬೇಡ ಎನ್ನಲಿಲ್ಲ.